ಅ) ಅಂಗೀಕೃತ ಯೋಜನಾ ವೆಚ್ಚ ಮತ್ತು ಪರಿಷ್ಕೃತ ಯೋಜನಾ ವೆಚ್ಚದ ವ್ಯತ್ಯಾಸದ ಮೊತ್ತ ರೂ. 568.65 ಕೋಟಿಗಳು.

ಇ) ಕೇಂದ್ರ ತೆರಿಗೆ ಪಾಲಿನಲ್ಲಿ ಹಾಗೂ ರಾಜ್ಯ ತೆರಿಗೆ ವಸೂಲಿಯಲ್ಲಿ ಕಡಿಮೆಯಾಗಿರುವುದೇ ಈ ವ್ಯತ್ಯಾಸಕ್ಕೆ ಕಾರಣವಾಗಿದೆ. ಯೋಜನಾ ಕಾರ್ಯಕ್ರಮಗಳಿಗೆ ಹೆಚ್ಚಿನ ಹಣ ದೊರಕುವಂತೆ ಮಾಡಲು ಸಂಪನ್ಮೂಲಗಳನ್ನು ಹೆಚ್ಚಿಸಲು ಹಾಗೂ ಏಕಕಾಲದಲ್ಲಿ ಯೋಜನೇತರ ವೆಚ್ಚವನ್ನು ಮಿತಿಗೊಳಿಸಲು ಸರ್ಕಾರವು ಸಾಧ್ಯವಾದ ಎಲ್ಲಾ ಕ್ರಮಗಳನ್ನು ತೆಗೆದುಕೊಂಡಿದೆ.

ಬೆಂಗಳೂರು ಮಹಾನಗರ ಪಾಲಿಕೆಗೆ ಬಂದ ಅಧಿಕಾರಿಗಳ ಸಂಖ್ಯೆ

5114 - ಶ್ರೀ ಕೆ.ಎನ್. ಸುಬ್ಬಾರೆಡ್ಡಿ (ಬಸವನಗುಡಿ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ಮಹಾನಗರ ಪಾಲಿಕೆಗೆ ವಿವಿಧ ಇಲಾಖೆಗಳಿಂದ ಬಂದ ಉಸ್ತುವಾರಿ ಅಧಿಕಾರಿಗಳ ಸಂಖ್ಯೆ ಎಷ್ಟು?

ಆ) ಇದರಿಂದ ಮಹಾನಗರ ಪಾಲಿಕೆಗೆ ತಗಲುವ ಅಧಿಕ ವೆಚ್ಚವೆಷ್ಟು?

ಇ) ಬೆಂಗಳೂರು ಮಹಾನಗರ ಪಾಲಿಕೆಗೆ ವಿವಿಧ ಇಲಾಖೆಗಳಿಂದ ಬಂದ ಅಧಿಕಾರಿಗಳಿಂದ ಆದ ಪ್ರಯೋಜನವೇನು?

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಗಳು) :

ಅ) 39.

ಆ) ಪ್ರತಿ ತಿಂಗಳಿಗೆ ರೂ. 7.78 ಲಕ್ಷಗಳು.

ಇ) ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಬಾಂಡ್ ಸ್ಕೀಂ ರಸ್ತೆ ಅಭಿವೃದ್ಧಿ ಕಾಮಗಾರಿ, ಮೆಗಾಸಿಟಿ ಯೋಜನೆ, ಮೇಲು ಸೇತುವೆ ಯೋಜನೆಗಳನ್ನು ನಿಗಧಿತ ಅವಧಿಯಲ್ಲಿ ಪೂರ್ಣಗೊಳಿಸುವ ಸಲುವಾಗಿ ಈ ಕೆಲಸ ಕಾರ್ಯಗಳಲ್ಲಿ ನೈಪುಣ್ಯತೆ ಹೊಂದಿರುವ ಅಧಿಕಾರಿಗಳನ್ನು ನಿಯೋಜಿಸಿಕೊಂಡು, ಮೇಲ್ಕಂಡ ಕೆಲಸ ಕಾರ್ಯಗಳಲ್ಲಿ ಸಲಹೆ-ಸಹಕಾರವನ್ನು ಪಡೆಯಲಾಗುತ್ತಿದೆ.

ಇದಲ್ಲದೆ, 100 ವಾರ್ಡುಗಳನ್ನಾಗಿ ಬೆಂಗಳೂರು ಮಹಾನಗರ ಪಾಲಿಕೆಯನ್ನು ವಿಂಗಡಿಸಲಾಗಿರುವುದರಿಂದ, ಜನಸಾಮಾನ್ಯರ ಕೆಲಸ ಕಾರ್ಯಗಳು ಶೀಘ್ರವಾಗಿ ವಿಲೇವಾರಿ ಆಗುವ ಸಲುವಾಗಿ ನಗರ ಪಾಲಿಕೆಯ ಆಡಳಿತವನ್ನು 3 ವಲಯಗಳನ್ನಾಗಿ ವಿಂಗಡಿಸಿ ಸದರಿ ಅಧಿಕಾರಿಗಳಿಗೆ ಅಧಿಕಾರ ಪ್ರತ್ಯಾಯೋಜನೆ ಮಾಡಿದ್ದು, ಇದರಿಂದ ನಿಯೋಜಿಸಿರುವ ಅಧಿಕಾರಿಗಳಿಂದ ಪ್ರಯೋಜನ ಪಡೆಯಲಾಗುತ್ತಿದೆ.

ಅಲ್ಲದೆ, ಸ್ವಯಂ ಘೋಷಣಾ ಆಸ್ತಿ ಪದ್ಧತಿ ಮತ್ತು ಸಾಮಾನ್ಯ ಪರಿಷ್ಕರಣೆ ಕೈಗೊಂಡಿರುವ ಕೆಲಸ-ಕಾರ್ಯಗಳಿಗೂ ಸಹ ಅಧಿಕಾರಿಗಳ ಪ್ರಯೋಜನವನ್ನು ಪಡೆಯಲಾಗುತ್ತಿದೆ.